ಖಾಸಗಿ ದಂತ ಕಾಲೇಜುಗಳಲ್ಲಿರುವ ಒಟ್ಟು ಸ್ನಾತಕೋತ್ತರ ದಂತ ಸೀಟುಗಳು - 234

ಸರ್ಕಾರಿ ಕಾಲೇಜುಗಳಲ್ಲಿರುವ ಒಟ್ಟು ವೈದ್ಯಕೀಯ ಸ್ನಾತಕೋತ್ತರ ಸೀಟುಗಳು - 379

ಸರ್ಕಾರಿ ಕಾಲೇಜುಗಳಲ್ಲಿರುವ ದಂತ ಸ್ನಾತಕೋತ್ತರ ಸೀಟುಗಳು - 20

ಆ) ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿರುವ ಸರ್ಕಾರಿ ಮೆರಿಟ್ ಸೀಟುಗಳು - 173

ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿರುವ ಆಡಳಿತ ಮಂಡಳಿಯ ಸೀಟುಗಳು - 715

ಖಾಸಗಿ ದಂತ ಕಾಲೇಜುಗಳಲ್ಲಿರುವ ಸರ್ಕಾರಿ ಮೆರಿಟ್ ಸೀಟುಗಳು - 43

ಖಾಸಗಿ ದಂತ ಕಾಲೇಜುಗಳಲ್ಲಿರುವ ಆಡಳಿತ ಮಂಡಳಿ ಸೀಟುಗಳು - 191

ಬೆಂಗಳೂರು ನಗರದಲ್ಲಿರುವ ಖಾಸಗೀ ಶಾಲೆಗಳಲ್ಲಿ ಸಮವಸ್ತ್ರ ಖರೀದಿಸುವುದನ್ನು ತಡೆಗಟ್ಟುವುದು.

1435 (1615)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಬಹುತೇಕ ಖಾಸಗೀ ಶಾಲೆಗಳಲ್ಲಿ ಸಮವಸ್ತ್ರ (ಯೂನಿಫಾರಂ)ಗಳನ್ನು ವಿದ್ಯಾರ್ಥಿಗಳು ತಮ್ಮ ಶಾಲೆಯಲ್ಲಿಯೇ ಖರೀದಿಸಬೇಕೆಂಬ ಷರತ್ತು ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಮಾರುಕಟ್ಟೆಯಲ್ಲಿ ಕಡಿಮೆ ಬೆಲೆಗೆ ಈ ಸಮವಸ್ತ್ರ ದೊರೆಯುತ್ತಿದ್ದರೂ ಸಹ ಪೋಷಕರು ಹೆಚ್ಚು ಬೆಲೆ ನೀಡಿ ಆಯಾ ಶಾಲೆಗಳಲ್ಲಿಯೇ ಸಮವಸ್ತ್ರ ಖರೀದಿಸುವ ಪದ್ಧತಿಯನ್ನು ಸರ್ಕಾರ ನಿಲ್ಲಿಸಲು ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಪಿ.ಯು.ಸಿ. ಪಠ್ಯಕ್ರಮದಲ್ಲಿರುವ ನ್ಯೂನ್ಯತೆಗಳು.

1437 (1617)

ಶ್ರೀ ರಾಮಲಿಂಗಾರೆಡ್ಡಿ (ಜಯನಗರ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿ.ಬಿ.ಎಸ್.ಇ. ನಡೆಸುವ 12ನೇ ತರಗತಿ ಪರೀಕ್ಷೆಗಳು ಹಾಗೂ ರಾಜ್ಯದ ಎರಡನೇ ವರ್ಷದ ಪ್ರಿಯೂನಿವರ್ಸಿಟಿ ಪರೀಕ್ಷೆಗೆ ಸಮವೆಂದು ಸರ್ಕಾರ ನಿರ್ಧರಿಸಿದೆಯೆ?

ಆ) ಹಾಗಿದ್ದಲ್ಲಿ ಸಿ.ಬಿ.ಎಸ್.ಇ.ನಲ್ಲಿ ವ್ಯಾಸಂಗ ಮಾಡತಕ್ಕ ವಿದ್ಯಾರ್ಥಿಗಳು ಕೇವಲ ಒಂದು ಪ್ರಥಮ ಅಥವಾ ದ್ವಿತೀಯ ಭಾಷೆಯ 100 ಅಂಕಗಳು ಪತ್ರಿಕೆಗೆ ಉತ್ತರ ಬರೆಯುತ್ತಿರುವುದು ನಿಜವೆ?

ಇ) ಹಾಗಿದ್ದಲ್ಲಿ ಎರಡನೇ ಪ್ರಿಯೂನಿವರ್ಸಿಟಿಯ ವಿದ್ಯಾರ್ಥಿಗಳು 200 ಅಂಕಗಳಿಗೆ ಅಂದರೆ ಎರಡು ಭಾಷಾ ಪತ್ರಿಕೆಗಳನ್ನು ವ್ಯಾಸಂಗ ಮಾಡುತ್ತಿರುವುದು ಸರಿಯೆ?

ಈ) ಈ ತಾರತಮ್ಯವನ್ನು ತಪ್ಪಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

ಅ) ಹೌದು

ಆ) ಹೌದು

ಇ) ಕರ್ನಾಟಕ ಸರ್ಕಾರವು ಪ್ರೌಢಶಿಕ್ಷಣ ಹಂತದವರೆಗೆ ತ್ರಿಭಾಷಾ ಸೂತ್ರವನ್ನು ಮತ್ತು ಪದವಿ ಪೂರ್ವ ಶಿಕ್ಷಣದ ಪ್ರಿಯೂನಿವರ್ಸಿಟಿಯಿಂದ ದ್ವಿಭಾಷಾ ಸೂತ್ರವನ್ನು ಅಳವಡಿಸಿಕೊಂಡಿದೆ. ಅದರ ಪ್ರಕಾರ ಪದವಿ ಪೂರ್ವ ಶಿಕ್ಷಣ ವಿದ್ಯಾರ್ಥಿಗಳು ಎರಡು ಭಾಷೆಗಳನ್ನು ವ್ಯಾಸಂಗ ಮಾಡುತ್ತಾರೆ. ಇದು ಪ್ರಾರಂಭದಿಂದ ನಡೆದುಕೊಂಡು ಬಂದಿರುವ ಪದ್ಧತಿಯಾಗಿರುತ್ತದೆ. ಸರ್ಕಾರದ ನಿಯಮಾನುಸಾರ ಇದು